ಯೋಜನಾ ಪ್ರಾಧಿಕಾರ ಮತ್ತು ನಗರಾಭಿವೃದ್ಧಿ ಮಂಡಳಿ. ಇವೆರಡೂ ಜಿಲ್ಲಾಧಿಕಾರಿಗಳಿವರ ನೇತೃತ್ವದಲ್ಲಿ ಕೆಲಸ ಮಾಡುವಂತಹ ಪ್ರಾಧಿಕಾರಗಳು ರಚಿಸಲ್ಪಟ್ಟಿವೆ. ಅವರು ನಗರಾಭಿವೃದ್ಧಿ ವಿಷಯಗಳ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಐ. ಬಿ. ಶಂಕರ್.—ಅಲ್ಲಿಯ ಅಧಿಕಾರಿಗಳು ಯಾವುದೋ ಆಮಿಷಗಳಿಗೆ ಒಳಗಾಗಿ ಚರಂಡಿಗಳ ಮೇಲೆ ಅನಧಿಕೃತವಾಗಿ ಮನೆ ಕಟ್ಟಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಇಂತಹ ಪ್ರಕರಣಗಳಿಗೆ ಅವಕಾಶ ಮಾಡಿಕೊಟ್ಟ ಅಧಿಕಾರಿಗಳ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ ಚಂದ್ರಶೇಖರ್.— ಮಾನ್ಯ ಸದಸ್ಯರು ವ್ಯಕ್ತಪಡಿಸಿದ ವಿಚಾರಗಳ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಒಂದು ವರದಿಯನ್ನು ಕಳುಹಿಸಿಕೊಡುವಂತೆ ತಿಳಿಸುತ್ತೇನೆ. ಇಂತಹ ಅಕ್ರಮಗಳ ಕಾಲದಲ್ಲಿ ಅಲ್ಲಿ ಯಾರ್ಯಾರು ಅಧಿಕಾರಿಗಳು ಇದ್ದರು ಎಂದು ತಿಳಿದುಕೊಂಡು ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ಗೃಹ ಮಂಡಳಿಯಿಂದ ಕಟ್ಟಿಸಿದ ಮನೆಗಳು

೧೮೨೦. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ಗೃಹ ಮಂಡಳಿಯವರು ಈವರೆಗೆ ನಿರ್ಮಿಸಿದ ಮನೆಗಳೆಷ್ಟು ?

ಆ) ನೂತನವಾಗಿ ಮನೆಗಳನ್ನು ನಿರ್ಮಿಸುವ ಯೋಜನೆ ಮಂಡಳಿಯ ಉದ್ದೇಶವಿದೆಯೇ ?

ಇ) ಹಾಗಿದ್ದಲ್ಲಿ ಈ ಮನೆಗಳೆಷ್ಟು ? ಮತ್ತು ನಿರ್ಮಾಣ ಮಾಡುವ ಸ್ಥಳಗಳಾವುವು ?

ಶ್ರೀ ಮೊಹಮ್ಮದ್ ಮೊಯಿನುದ್ದೀನ್ (ವಸತಿ ಸಚಿವರು).—

ಅ) ೧೭೬೨.

ಆ) ನೂತನವಾಗಿ ಮನೆಗಳನ್ನು ನಿರ್ಮಿಸುವ ಯೋಜನೆ ಮಂಡಳಿಗಿದೆ.

ಇ) ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳದಲ್ಲಿ ೪೫ ಮನೆಗಳನ್ನು ವಿವಿಧ ವರ್ಗಗಳ ಜನರಿಗಾಗಿ ನಿರ್ಮಿಸುವ ಉದ್ದೇಶವಿದೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ನಾನು ಕೇಳಿದ "ಅ" ಪ್ರಶ್ನೆಗೆ ಮಾನ್ಯ ಸಚಿವರು ೧೭೬೨ ಮನೆಗಳನ್ನು ನಿರ್ಮಿಸಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಹಾಗಿದ್ದಲ್ಲಿ, ಈ ೧೭೬೨ ಮನೆಗಳಲ್ಲಿ ಸ್ವಾಧೀನ ಹೊಂದಿರತಕ್ಕಂಥ ಫಲಾನುಭವಿಗಳ ಸಂಖ್ಯೆ ಎಷ್ಟು? ಮತ್ತು ಹಾಗೆಯೇ ಬಿಟ್ಟಿರತಕ್ಕಂಥ ಮನೆಗಳ ಸಂಖ್ಯೆ ಎಷ್ಟು ?

ಶ್ರೀ ಮೊಹಮ್ಮದ್ ಮೊಯಿನುದ್ದೀನ್.—ಈ ೧೭೬೨ ಮನೆಗಳನ್ನು ಸಂಪೂರ್ಣವಾಗಿ ಫಲಾನುಭವಿಗಳಿಗೆ ಕೊಡಲಾಗಿದೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಮಾನ್ಯ ಸಚಿವರು ಹೇಳುವಂಥ ವಿಚಾರವು ಸತ್ಯಕ್ಕೆ ತುಂಬಾ ದೂರವಾದುದು ಎಂದು ಹೇಳಬೇಕಾಗುತ್ತದೆ. ಅವರಲ್ಲಿ ಪೂರ್ಣ ಮಾಹಿತಿಯು ಇಲ್ಲ ಎಂದೂ ಕಾಣುತ್ತದೆ. ಅಲ್ಲಿ ಬೇರೆ ಬೇರೆ ಕಾರಣಗಳಿಗೋಸ್ಕರ ಅಂದರೆ, ನೀರಿನ ವ್ಯವಸ್ಥೆ ಇಲ್ಲದಿರುವುದೂ, ವಿದ್ಯುತ್‌ಚ್ಛಕ್ತಿ ವ್ಯವಸ್ಥೆ ಇಲ್ಲದಿರುವುದು, ಚರಂಡಿವ್ಯವಸ್ಥೆ ಇಲ್ಲದಿರುವುದು ಮುಂತಾಗಿ ನಾನಾ ಕಾರಣಗಳಿಗಾಗಿ ಆ ಮನೆಗಳಲ್ಲಿ ಕೆಲವು ಮನೆಗಳು ಖಾಲಿ ಇವೆ ಎಂದು ತಿಳಿದುಬರುತ್ತದೆ. ಆದುದರಿಂದ ಸಚಿವರು ಕೊಟ್ಟ ಉತ್ತರ ಸರಿಯಾಗಿಲ್ಲ ಎಂದು ಹೇಳಬಯಸುತ್ತೇನೆ.

ಶ್ರೀ ಮಹಮದ್ ಮೊಯಿನುದ್ದೀನ್.—ಅಲ್ಲಿಯ ೧೭೬೨ ಮನೆಗಳಲ್ಲಿ ಎಲ್ಲಾ ಮನೆಗಳೂ ಅಲಾಟ್ ಆಗಿವೆ. ಅಲಾಟ್ ಆದವರು ಅಕ್ಯುಪೈ ಮಾಡಿಕೊಳ್ಳುತ್ತಾರೆ. ಆದರೆ ಅಲಾಟ್ ಆದವರಲ್ಲಿ ಕೆಲವರು ಸ್ವಂತ ಕಾರಣಕ್ಕಾಗಿ ಅಕ್ಯುಪೈ ಮಾಡಿಕೊಳ್ಳದಿರಬಹುದು ಎಂದು ಕಾಣುತ್ತದೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ —ಅಲಾಟ್‌ಮೆಂಟ್ ಬಾರದ ಕಾರಣ ಪರ್‌ಚೇಸ್ ಮಾಡಿಲ್ಲ ಎಂದು ನನಗೆ ತಿಳಿದು ಬಂದಿದೆ. ನನ್ನ ಕ್ಷೇತ್ರದ ಕುಂಬಾಶಿಯಲ್ಲಿ ಎಲ್ಲಾ ಮನೆಗಳು ಸ್ವಾಧೀನ ಆಗಿಲ್ಲ. ಅಲ್ಲಿ ನೀರಿನ ಕೊರತೆ ಇದೆ. ಹಾಗಾಗಿ ಅಲ್ಲಿಗೆ ಯಾರೂ ಬಂದಿಲ್ಲ. ಆ ಬಗ್ಗೆ ತಮ್ಮಲ್ಲಿ ವಿವರಗಳು ಇಲ್ಲ ಎಂದು ಕಾಣುತ್ತದೆ.

ಶ್ರೀ ಮೊಹಮ್ಮದ್ ಮೊಯಿನುದ್ದೀನ್.—ನನ್ನ ಹತ್ತಿರ ಇರುವ ಮಾಹಿತಿಯ ಪ್ರಕಾರ ಅಲ್ಲಿ ಎಲ್ಲಾ ಮನೆಗಳೂ ಅಲಾಟ್ ಆಗಿವೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ. ಈ ೧೭೬೨ ಮನೆಗಳನ್ನು ಫಲಾನುಭವಿಗಳಿಗೆ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಹಾಗೆಯೇ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ ತಾಲ್ಲೂಕಿನಲ್ಲಿ ವಿವಿಧ ವರ್ಗಗಳ ಜನರಿಗಾಗಿ ೪೫೫ ಮನೆಗಳನ್ನು ನಿರ್ಮಿಸುವ ಉದ್ದೇಶ ಇದೆ ಎಂದು ಹೇಳಿದ್ದಾರೆ, ಹಾಗಾದರೆ ಆ ಮನೆಗಳನ್ನು ಕಾರ್ಕಳದಲ್ಲಿ ಎಲ್ಲಿ ಕಟ್ಟುವಂಥ ನಿಶ್ಚಯ ಮಾಡಿದ್ದೀರಿ. ?

ಶ್ರೀ ಮೊಹಮ್ಮದ್ ಮೊಯಿನುದ್ದೀನ್.—ಅಲ್ಲಿ ೪೫೫ ಮನೆಗಳನ್ನು ಕಟ್ಟುವ ಉದ್ದೇಶವಿದೆ, ಅದರ ಬಗ್ಗೆ ಪ್ರಾಜೆಕ್ಟ್‌ಸ್ಕೀಮ್ ತಯಾರಾಗುತ್ತಾ ಇದೆ. ಅದರ ಬಗ್ಗೆ ವಿವರಗಳನ್ನು ಕೊಡುತ್ತೇನೆ. ತಾಲ್ಲೂಕುವಾರು ಮಾಹಿತಿಯನ್ನು ತಾವುಗಳು ಕೇಳಿದ್ದೀರಿ. ಮತ್ತು ಹಂಚಿಕೆಯ ಪಟ್ಟಿಯು ಬಹಳ ದೊಡ್ಡದಾಗಿ ಇರುವುದರಿಂದ ಅದನ್ನು ತಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಅಧ್ಯಕ್ಷರೆ.....

MR. SPEAKER.—I have not allowed you to speak.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಸಚಿವರು ಕೊಟ್ಟಿರತಕ್ಕಂಥ ಉತ್ತರವು ಸರಿಯಾಗಿಲ್ಲ. ಉತ್ತರದಲ್ಲಿ ಕಾರ್ಕಳದಲ್ಲಿ ೪೫೫ ಮನೆಗಳನ್ನು ವಿವಿಧವರ್ಗಗಳ ಜನರಿಗೆ ನಿರ್ಮಿಸಲಾಗುವುದು ಎಂದು ಹೇಳಿದ್ದಾರೆ. ಆ ಮನೆಗಳನ್ನು ಎಲ್ಲಿ ಕಟ್ಟಲು ಉದ್ದೇಶಿಸಿದ್ದಾರೆ ಎಂದು ಹೇಳುವುದು ಬೇಡವೆ, ?

ಶ್ರೀ ಮೊಹಮ್ಮದ್ ಮೊಯಿನುದ್ದೀನ್.—ಇದನ್ನು ಕಾರ್ಕಳ ಟೌನಿನಲ್ಲಿ ಮಾಡುತ್ತೇವೆ.

ಶಹಬಾದ್ ಪಟ್ಟಣಕ್ಕೆ ನೀರು ಸರಬರಾಜು ಯೋಜನೆ.

೨೧೫೭. ಶ್ರೀ ಕೆ. ಬಿ. ಶಾಣಪ್ಪ (ಶಹಾಬಾದ್) ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೪ರಲ್ಲಿ ಶಹಬಾದ್ ಪಟ್ಟಣಕ್ಕೆ ಹೆಚ್ಚು ನೀರು ಸರಬರಾಜು ಮಾಡುವ ಯೋಜನೆಗೆ ಮಾನ್ಯ ಮುಖ್ಯ ಮಂತ್ರಿಗಳು ಅಡಿಗಲ್ಲು ಹಾಕಿದ್ದು ನಿಜವೆ ?

ಆ) ಸದರಿ ಯೋಜನೆಗೆ ಯಾವ ಯಾವ ಸಂಸ್ಥೆಗಳಿಂದ ಹಣ ಪಡೆಯಲಾಯಿತು ಮತ್ತು ಬಡ್ಡಿ ರೂಪದಲ್ಲಿ ಪಾವತಿ ಮಾಡಲಾದ ಹಣವೆಷ್ಟು ?

ಇ) ಸದರಿ ಯೋಜನೆಯನ್ನು ಕಾರ್ಯ ರೂಪಕ್ಕೆ ತರಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಎಂ. ಚಂದ್ರಶೇಖರ್, (ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಸಚಿವರು).—

ಅ) ಹೌದು.

ಆ) ಸದರಿ ಯೋಜನೆಗೆ ಸರ್ಕಾರದಿಂದ ಒದಗಿಸಲಾದ ಸಾಲದ ಜೊತೆಗೆ ಜೀವ ವಿಮಾ ನಿಗಮದಿಂದ ಮತ್ತು ಮಾರುಕಟ್ಟೆ ಸಾಲದಿಂದ ಹಣ ಪಡೆಯಲಾಗಿದೆ. ಜೀವ ವಿಮಾ ನಿಗಮಕ್ಕೆ ಹಾಗೂ ಮಾರುಕಟ್ಟೆ ಸಾಲಕ್ಕೆ ೧೧.೮೨ ಲಕ್ಷ ರೂಗಳನ್ನು ಬಡ್ಡಿ ರೂಪದಲ್ಲಿ ಪಾವತಿ ಮಾಡಲಾಗಿದೆ.

ಇ) ಈ ಯೋಜನೆಯು ಕೆಲಸಗಳಲ್ಲಿ ೭ ೦೦ ಲಕ್ಷ ಗ್ಯಾಲನ್ ಸಾಮರ್ಥ್ಯದ ನೆಲಮಟ್ಟದ ಜಲ ಸಂಗ್ರಹಾಗಾರದ ಕೆಲಸವು ಮೇಲ್ಚಾವಣಿ ಮಟ್ಟದವರೆಗೆ ಬಂದಿದ್ದು ಮೇಲ್ಚಾವಣಿಗೆ ಕಾಂಕ್ರೀಟ್ ಹಾಕುವ ಕೆಲಸಕ್ಕೆ ಏರ್ಪಾಡು ಮಾಡಲಾಗುತ್ತಿದೆ, ೩೫೦ ಮಿ.ಮೀ. ವ್ಯಾಸದ ಬೀಡು ಕಬ್ಬಿಣದ ಪೈಪು